

ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭವೊಂದರ ಬೆರಗು ಬಿನ್ನಾಣ

ಪಟಿಯಾಲದಲ್ಲಿ ಅಭ್ಯಾಸ ಮಾಡುವಾಗ 70 ಮೀಟರ್ ಆಸುಪಾಸಿನಲ್ಲಿ ಜಾವೆಲಿನ್ ಎಸೆಯುತ್ತಿದ್ದ ನೀರಜ್ ಈಗ 90 ಮೀಟರ್ ಸಮೀಪದಲ್ಲಿದ್ದಾರೆ. ಎರಡು ವರ್ಷಗಳ ಹಿಂದೆ 89.94 ಮೀಟರ್ ಎಸೆದಿರುವುದು ಇದುವರೆಗಿನ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ ಎನಿಸಿದೆ. ಅಥ್ಲೆಟಿಕ್ಸ್‌ನ ಜಾವೆಲಿನ್ ವಿಭಾಗದಲ್ಲಿ ಅವರೀಗ ವಿಶ್ವದ ಅಗ್ರ ಅಥ್ಲೀಟ್. ಹೀಗಾಗಿ ಚಿನ್ನದ ಪದಕದ ಭರವಸೆಯೂ ಹೆಚ್ಚಿದೆ.

## ವಿನೇಶ್ ಪೋಗಟ್ ಬಲ

ಆಟಗಾರ್ತಿಯರ ಮೇಲೆ ದೌರ್ಜನ್ಯದ ಆರೋಪ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ವಿವಾದದ ಗೂಡಾಗಿ ಬಯಲಿಗೆ ಬಂದಿದ್ದ 'ಕುಸ್ತಿ' ಹಲವು ತಿಂಗಳುಗಳಿಂದ ಕ್ರೀಡಾ ಸಾಧನೆಗಿಂತ ವೇದನೆಯಿಂದಲೇ ಹೆಚ್ಚು ಸುದ್ದಿಯಾಗಿದೆ. ಈ ಎಲ್ಲ ಅಡೆತಡೆಗಳ ನಡುವೆ ವಿನೇಶ್ ಪೋಗಟ್ ಒಲಿಂಪಿಕ್ಸ್ ಅಖಾಡದಲ್ಲಿ ದೇಶದ ಕುಸ್ತಿಗೆ ಬಲ ತಂದುಕೊಡುವ ನಿರೀಕ್ಷೆಯಿದೆ.

ವಿಶ್ವ ಚಾಂಪಿಯನ್‌ಷಿಪ್, ಏಷ್ಯನ್ ಚಾಂಪಿಯನ್‌ಷಿಪ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗೆದ್ದಿರುವ ವಿನೇಶ್ ಪೋಗಟ್ ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದು, ಕೇಂದ್ರ ಕ್ರೀಡಾ ಸಚಿವಾಲಯ ಪೋಗಟ್ ಅವರಿಗೆ ಸ್ಪೇನ್‌ನಲ್ಲಿ ತರಬೇತಿ ಕೊಡಿಸಿದೆ. ತಂಡದ ಆಟಗಾರರ ಜೊತೆ ತರಬೇತಿಗೆ ಹೋಗಲು ನಿರಾಕರಿಸಿದ್ದು ಮತ್ತು ಶಿಸ್ತು ಉಲ್ಲಂಘನೆ ಕಾರಣಕ್ಕಾಗಿ ವಿನೇಶ್ ಹಿಂದಿನ ಒಲಿಂಪಿಕ್ಸ್ ಸಮಯದಲ್ಲಿ ಭಾರತ ಕುಸ್ತಿ ಫೆಡರೇಷನ್‌ನಿಂದ ಅಮಾನತು ಶಿಕ್ಷೆ ಎದುರಿಸಬೇಕಾಗಿತ್ತು. ಈ ಬಾರಿ ಅವರು 50 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲಿದ್ದು, ಹಿಂದಿನ ಒಲಿಂಪಿಕ್ಸ್ ಬಳಿಕ 2022ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ, ಅದೇ ವರ್ಷ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದುಕೊಂಡಿದ್ದರು.

## ಪಿ.ವಿ. ಸಿಂಧು ಹಾಗೂ ಡಬಲ್ಸ್ ಜೋಡಿ

ಹಿಂದಿನ ಸತತ ಎರಡು ಒಲಿಂಪಿಕ್ಸ್‌ನ ಬ್ಯಾಡ್ಮಿಂಟನ್‌ನಲ್ಲಿ ಎರಡು ಸಲ ಪದಕಗಳನ್ನು ಗೆದ್ದ ದಾಖಲೆ ಹೊಂದಿರುವ ಪಿ.ವಿ. ಸಿಂಧು ಈ ಬಾರಿಯೂ ಮಹಿಳಾ ಸಿಂಗಲ್ಸ್‌ನಲ್ಲಿ ಪದಕದ ನಿರೀಕ್ಷೆ ಮೂಡಿಸಿದ್ದಾರೆ.

ಹಲವು ಬಾರಿ ಗಾಯದ ಸಮಸ್ಯೆ ಎದುರಿಸಿರುವ ಹೈದರಾಬಾದ್‌ನ ಆಟಗಾರ್ತಿ 2022ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ, ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು, ಸ್ವಿಸ್ ಓಪನ್, ಸಿಂಗಪುರ ಓಪನ್ ಟೂರ್ನಿಗಳಲ್ಲಿ

## ಮತ್ತೊಂದು ಚಿನ್ನದ ನಿರೀಕ್ಷೆ



ಹಿಂದಿನ ಒಲಿಂಪಿಕ್ಸ್‌ನಲ್ಲಿ ನಿರೀಕ್ಷೆಗೂ ಮೀರಿ ಸಾಮರ್ಥ್ಯ ತೋರಿರುವ ನೀರಜ್ ಚೋಪ್ರಾ ಅವರಿಂದ ಚಿನ್ನದ ಪದಕ ನಿರೀಕ್ಷೆ ಮಾಡಬಹುದು. ಹಿಂದಿನ ಒಲಿಂಪಿಕ್ಸ್ ನಂತರ ಸ್ಪರ್ಧೆ ಎದುರಿಸಿದ ಬಹುತೇಕ ಎಲ್ಲ ಟೂರ್ನಿಗಳಲ್ಲಿಯೂ ನೀರಜ್ ಸ್ಥಿರ ಪ್ರದರ್ಶನ ತೋರಿಸುತ್ತಿದ್ದಾರೆ. 90 ಮೀಟರ್ ಸಮೀಪದಲ್ಲಿ ಜಾವೆಲಿನ್ ಎಸೆದಿದ್ದಾರೆ. ಆದ್ದರಿಂದ ಈ ಸಲವೂ ಚಿನ್ನ ಗೆಲ್ಲಬೇಕು ಎನ್ನುವ ಆಸೆ. ಭಾರತದ ಕೋಟ್ಯಂತರ ಕ್ರೀಡಾಪ್ರೇಮಿಗಳು ನೀರಜ್ ಚಿನ್ನದ ಪದಕವೇ ಗೆಲ್ಲಲಿ ಎಂದು ಹಾರೈಸುತ್ತಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವುದೇ ಅತ್ಯಂತ ಪ್ರತಿಷ್ಠೆಯ ಪ್ರಶ್ನೆ. ಈ ಸಲ ಅನೇಕ ಯುವ ಅಥ್ಲೀಟ್‌ಗಳು ಪಾಲ್ಗೊಂಡಿದ್ದರೂ ಸಾಮರ್ಥ್ಯ ಕೊರತೆಯಿಂದಾಗಿ ಅವರಿಂದ ಪದಕದ ನಿರೀಕ್ಷೆ ಕಷ್ಟವಾಗಿದೆ. ಫೈನಲ್ ಬಂದರೆ ಅದೇ ದೊಡ್ಡ ಸಾಧನೆ. ಪುರುಷರ 3000 ಮೀಟರ್ ಸ್ಟೀಪಲ್‌ಚೇಸ್‌ನಲ್ಲಿ ಅವಿನಾಶ ಸಬ್ಲೆ, ಮಹಿಳೆಯರ 3000 ಮೀಟರ್ ಸ್ಟೀಪಲ್‌ಚೇಸ್‌ನಲ್ಲಿ ಪರುಲ್ ಚೌಧರಿ ಫೈನಲ್ ತಲುಪುವ ನಿರೀಕ್ಷೆಯಿದೆ. ರಿಲೇ ತಂಡ ಫೈನಲ್ ಪ್ರವೇಶಿಸುವ ವಿಶ್ವಾಸವಿದೆ.

ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಕ್ರೀಡಾಪಟುಗಳಿಗೆ ಸರ್ಕಾರವೇ ಪ್ರೋತ್ಸಾಹ ನೀಡುತ್ತಿದೆ. ವಿದೇಶಿ ಕೋಚ್‌ಗಳು ಮತ್ತು ವಿದೇಶದಲ್ಲಿ ತರಬೇತಿಗೆ ವ್ಯವಸ್ಥೆ ಮಾಡುತ್ತಿದೆ. ಹೀಗಾಗಿ ಹಿಂದಿನ ಒಲಿಂಪಿಕ್ಸ್‌ಗಿಂತಲೂ ಹೆಚ್ಚಿನ ಪದಕಗಳನ್ನು ಗೆಲ್ಲಬಹುದು ಎನ್ನುವ ನಂಬಿಕೆಯಿದೆ.

**-ಪ್ರಮೀಳಾ ಅಯ್ಯಪ್ಪ,** ಅಂತರರಾಷ್ಟ್ರೀಯ ಮಾಜಿ ಅಥ್ಲೀಟ್